ಸೇತುವೆಗಳು ಕುಸಿಯುತ್ತ ಕಂದಕಗಳು ಅಗಲವಾಗುತ್ತಿರುವ, ಗೋಡೆಗಳು ತಲೆಎತ್ತುತ್ತಿರುವ ಈ ಹೊತ್ತು, ಉಸಿರುಗಟ್ಟಿಸುವಂತಿದೆ. ಚಾಂದ್ ಪಾಷಾ ಅವರ ಕವಿತೆಗಳು ಈ ತಲ್ಲಣದಲ್ಲಿ ಮೂಡಿವೆ. ಹೀಗಾಗಿ ನೇರವಾಗಿ ಸಾಮಾಜಿಕ ಸಂಗತಿಯನ್ನು ವಸ್ತುವಾಗಿ ಉಳ್ಳ ಕವಿತೆಗಳಿಗಿಂತಲೂ ಒಂದು ವೈಯಕ್ತಿಕವಾದ ಸಹಜ ನಂಟೂ ಬೆಸೆದುಕೊಳ್ಳಲು ಸಾಧ್ಯವಾಗಿಸದ ವಿಷಮತೆ ಇದ್ದಕ್ಕಿದ್ದಂತೆ ಮುಳ್ಳಿನ ಹಾಗೆ ಬಂದು ಇರಿಯುವುದನ್ನು ಕಾಣಿಸುವ ಕವಿತೆಗಳು ಕಾಡಿಬಿಡುತ್ತವೆ. ಹೀಗೆ ಕಾಡುತ್ತಾ ವೈಯಕ್ತಿಕತೆ ಸಾಮಾಜಿಕತೆ ಅಭಿನ್ನವಾಗುತ್ತದೆ.

ಕವಿತೆ ಒಡಮೂಡುವುದು ಭಾಷೆಯಲ್ಲಿ. ಕವಿ ಚಾಂದ್ ಪಾಷಾ ನಮ್ಮ ಲೋಕರೂಢಿಯ ಭಾಷೆ ಕಟ್ಟಿಕೊಟ್ಟ ಪದ ಮತ್ತು ಅರ್ಥಗಳ ನಂಟನ್ನು ಒಡೆಯುವ ಮೂಲಕ ಇನ್ನೇನನ್ನೋ ಕಾಣಿಸುವ ಯತ್ನ ಮಾಡುತ್ತಾರೆ. ಹೀಗೆ ಅವರು ಭಾಷೆ ಮತ್ತು ನಮ್ಮ ಗ್ರಹಿಕೆ ಇಟ್ಟ ಬೈನರಿಗಳನ್ನು ಒಡೆಯುತ್ತಾರೆ. ಶಬ್ದ-ನಿಶ್ಶಬ್ದ, ಕತ್ತಲೆ-ಬೆಳಕು, ಧರ್ಮ-ಅಧರ್ಮ ಇವುಗಳಿಗೆ ಲೋಕ ಕೊಟ್ಟ ಅರ್ಥಪರಂಪರೆಯಿದೆ. ಇದೇ ಜಾಡಿನಲ್ಲಿ ಹೋದರೆ ಇದೇ ಅರ್ಥಪರಂಪರೆಯ ಲೋಕದ ವೈರುಧ್ಯಗಳನ್ನು ಮೀರಲು ಸಾಧ್ಯವೇ? ಎಂಬುದು ನಮ್ಮ ಮುಂದಿರುವ ಪ್ರಶ್ನೆ. ಚಾಂದ್ ಪಾಷಾ ಅವರ ಸಾಲುಗಳು ಈ ಲೋಕರೂಢಿಯ ಅರ್ಥದ ಜೊತೆ ಗುದ್ದಾಡುತ್ತಿರುವುದು ಕುತೂಹಲ ಉಂಟುಮಾಡುತ್ತದೆ. ಈ ದಿಕ್ಕಿನಲ್ಲಿ ಅಲ್ಲಲ್ಲಿ ಚಮತ್ಕಾರ, ಇನ್ನು ಕೆಲವು ಕಡೆ ಗೋಜಲು ಎನಿಸಿದರೂ ಈ ಯತ್ನ ಮಹತ್ವದ್ದಾಗಿದೆ. 'ಮುದಿಮನಸ್ಸಿನ ಯೌವನಿಗನಿಗೆ ನರೆಗೂದಲು ಬಂದಿದೆ', 'ಬಟ್ಟೆ ತೊಟ್ಟು ನಗ್ನವಾಗುವುದು' ಎಂಬ ಪದಗುಚ್ಛಗಳು ಸ್ಥಾಪಿತ ಯೋಚನೆಯನ್ನು ಅಲುಗಾಡಿಸುತ್ತವೆ.

ಗದ್ದಲವನ್ನು ನಿಲ್ಲಿಸಲು ಕರ್ಫ್ಯೂ ಹಾಕುವ ವಿಚಾರ ಸಾಮಾನ್ಯವಾದುದು. ಆದರೆ, ಇಲ್ಲಿ ಕವಿ 'ಅರಚುವ ಅರಸನೆದುರು ನಿಶ್ಶಬ್ದ ನಿಂತು ನ್ಯಾಯ ಕೇಳುತ್ತಲೇ ಇದೆ' ಎನ್ನುತ್ತಾ ನಿಶ್ಶಬ್ದವನ್ನು ನಿಲ್ಲಿಸಲು ನಗರದಲ್ಲಿ ಕರ್ಫ್ಯೂ ಹಾಕಲಾಗಿದೆ ಎನ್ನುವ ವಿಪರ್ಯಾಸವನ್ನು ಒಡ್ಡುವ ಮೂಲಕ ಕಾಲದ ವ್ಯಂಗ್ಯವನ್ನು ಸಮರ್ಥವಾಗಿ ಎದುರಿಡುತ್ತಾರೆ. 'ಗಾಯ ಕಾಣದಿದ್ದರೂ ನೋವಿಗೇನೂ ಬರವಿರಲಿಲ್ಲ' ಎನ್ನುವುದರ ಮೂಲಕ ಅವ್ಯಕ್ತ ನೋವನ್ನು ಕಾಣಿಸುತ್ತಾರೆ. ಬರಡಾದ ಕಣ್ಣಿನ ಕಣ್ಣೀರು, ಎಣ್ಣೆ ಇಲ್ಲದ ಹಣತೆಯ ಬೆಳಕು ಇಂತಹ ಅಸಾಧ್ಯ ಸಾಧ್ಯತೆಗಳನ್ನು ಇಡುತ್ತಾ ನಮ್ಮ ಗ್ರಹಿಕೆಯ ಚೌಕಟ್ಟನ್ನು ವಿಸ್ತರಿಸುತ್ತಾರೆ.

ಮೇಲೆ ಹೇಳಿದ ವಿಚಾರವನ್ನೇ ಇಟ್ಟುಕೊಂಡು ನೋಡುವುದಾದರೆ, ವೈರುಧ್ಯಗಳನ್ನು ಒಡಲಲ್ಲಿ ಇಟ್ಟುಕೊಂಡು ಬೆಸುಗೆಯ ಮಾತನಾಡುವಾಗ ಒಂದು ಕಡೆ ಇದನ್ನು ಅರಿಯಲಾಗದ ಅಮಾಯಕತೆ ಇದ್ದರೆ, ಇನ್ನೊಂದು ಕಡೆ ತಿಳಿದೂ ಮಾಡುವ ಹಿಪೋಕ್ರಸಿ ಇರುತ್ತದೆ. ಇವುಗಳ ನಡುವೆ ಇವುಗಳನ್ನು ತೆರೆದು ತೋರುತ್ತಾ ಇವುಗಳನ್ನು ದಾಟುವ ದಾರಿಯನ್ನು ಹುಡುಕುವ ತೀವ್ರ ಹಂಬಲ ಹೊತ್ತಿರುವ ಕವಿ 'ಬೆಂಕಿ ಹಚ್ಚುವವರ ಕೈಗೆ ದೇಶ ಕೊಟ್ಟು, ಸುಟ್ಟ ಗಾಯಕ್ಕೆ ಔಷಧಿ ಹುಡುಕುತ್ತಿದ್ದೇವೆ' ಎನ್ನುತ್ತಾ ಇಲ್ಲಿನ ವಿರೋಧಾಭಾಸವನ್ನು ತೋರುತ್ತಿದ್ದಾರೆ. 'ಅಲ್ಲೊಂದು ಪುತ್ಥಳಿಯ ಕೈಗೆ ಪೊರಕೆ ಬರುತ್ತದೆ, ಕನ್ನಡಕ ಇನ್ನಷ್ಟು ಧೂಳಾಗುತ್ತದೆ' ಎನ್ನುವಾಗ ಈ ರೀತಿಯಲ್ಲಿ ಮಾಡುವ ಯತ್ನಗಳು ನೈಜ ಆಶಯ ಕಳಕೊಂಡು ಇರುವ ಬಿರುಕನ್ನೇ ಮತ್ತಷ್ಟು ದೊಡ್ಡದಾಗಿಸುವ ರೀತಿಯಲ್ಲಿವೆ ಎನ್ನುವುದು ವಿಷಾದ ಹುಟ್ಟಿಸುತ್ತದೆ.

ನಮ್ಮನ್ನು ಪೊರೆಯುವ, ಉದ್ಧರಿಸುವ ಮಾತುಗಳನ್ನಾಡುವ ಸಂಗತಿಗಳು ಈ ಸುಂದರ ಪೋಷಾಕಿನಡಿಯಲ್ಲಿ ನಮ್ಮ ಬದುಕನ್ನೇ ಕಿತ್ತುಕೊಳ್ಳುತ್ತಿವೆ. ಧರ್ಮ, ಪಿತೃಪ್ರಾಧಾನ್ಯ, ಜಾತಿ, ವರ್ಗಗಳ ಜಾಲಗಳು ವಿಷವರ್ತುಲ ಹೆಣೆದಿವೆ. 'ಧರ್ಮದ ನಿಯಮಗಳೇಕೆ ಮಿಂಚುಹುಳುವಿನ ಬೆಳಕ ಕದಿಯುತ್ತಿವೆ?' ಎನ್ನುವ ಕವಿಯ ಆರ್ತ ಪ್ರಶ್ನೆ ಇಲ್ಲಿದೆ. 'ಅವಳ ಸೆರಗು, ಹಿಜಾಬಿನ ತುಂಬೆಲ್ಲ ಗಂಡಸ್ತನದ ಕಣ್ಣುಗಳೇ ಅಂಟಿ'ಕೊಂಡಿರುವುದನ್ನು ಗುರುತಿಸುತ್ತಾ ಯಾವುದನ್ನು ಮುಚ್ಚಿಕೊಳ್ಳಲು ಧರಿಸಬೇಕೆನ್ನುತ್ತಾರೋ, ಅದರ ಒಡಲಲ್ಲೇ ಅಸಂಖ್ಯ ಕಣ್ಣುಗಳಿವೆ ಎನ್ನುವಾಗ ಮುಚ್ಚಿಕೊಳ್ಳುವುದರ ಅಥವಾ ಬಿಚ್ಚಿಕೊಳ್ಳುವುದರ ಹಿಂದಿನ ಧರ್ಮ ಮತ್ತು ಪುರುಷ ರಾಜಕಾರಣ ಅತ್ಯದ್ಭುತವಾಗಿ ಬಯಲಾಗುತ್ತದೆ.

ಇವುಗಳ ಜೊತೆಗೇ ಆಹಾರದ ರಾಜಕಾರಣವೂ ಇದೆ. 'ಹಸಿವಿನ ಗುಜರಿ ಐಟಂ' ಎನ್ನುವ ಕವಿತೆಯಲ್ಲಿ 'ನಾವು ನಿಮ್ಮ ಮುಕ್ಕೋಟಿ ದೇವತೆಗಳನ್ನು ತಿನ್ನುತ್ತಿಲ್ಲ,